**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

**ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆಃ 7/2020**

ಅ.ಸಾ. 01

ದೊ.ಸಾ 02

| | |
|---|---|
| ಸಾಕ್ಷಿಯ ಹೆಸರು | ಃ ಲೋಹಿತ ಸಂಕನಗೌಡ |
| ತಂದೆ ಹೆಸರು | ಃ ಯಲ್ಲನಗೌಡ |
| ವಯಸ್ಸು | ಃ 39 ವರ್ಷ |
| ಉದ್ಯೋಗ | ಃ ಎಫ್.ಡಿ.ಎ., ತಹಶೀಲ್ದಾರ ಕಾರ್ಯಾಲಯ, ಹುಬ್ಬಳ್ಳಿ |
| ವಾಸಸ್ಥಳ | ಃ ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | ಃ 07/12/2021 |

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ.3 ಮಹೇಶ ಈತನ ಪರಿಚಯವಿದೆ. ಆತ ನಮ್ಮ ಕಚೇರಿಯಲ್ಲಿಯೇ ಕೆಲಸ ಮಾಡುತ್ತಾನೆ. 2012 ರಿಂದ ನಾನು ಹುಬ್ಬಳ್ಳಿ ತಹಶೀಲ್ದಾರ ಕಚೇರಿಯಲ್ಲಿ ಬೇರೆ ಬೇರೆ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ.

**2.** ದಿಃ02/09/2020 ರಂದು ನಾನು ತಹಶೀಲ್ದಾರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೆ. ಮದ್ಯಾಹ್ನ ಸುಮಾರು 3.30 ಗಂಟೆ ಸಮಯಕ್ಕೆ ತಹಶೀಲ್ದಾರರು ಲಿಖಿತ ಆದೇಶ ನೀಡಿ, ಹುಬ್ಬಳ್ಳಿಯ ಸಬ್ ಅರ್ಬನ್ ಪೋಲಿಸ್ ಠಾಣೆಗೆ ಒಂದು ಪ್ರಕರಣದಲ್ಲಿ ಸಾಕ್ಷಿಯಾಗಿ ಹೋಗಬೇಕು ಎಂದು ತಿಳಿಸಿದರು. ಅದರಂತೆ ನಾನು ಮತ್ತು ಚಾಸಾ.3 ಮಹೇಶ ನಮ್ಮ ಕಚೇರಿಯಿಂದ ಹುಬ್ಬಳ್ಳಿ ಸಬ್ ಅರ್ಬನ್ ಪೋಲಿಸ್ ಠಾಣೆಗೆ ಸಂಜೆ 4.00 ಗಂಟೆ ಸಮಯಕ್ಕೆ ಹೋದೆವು. ಚಾಸಾ.1 ಪಿ.ಐ., ಗಾಂಜಾ ತೆಗೆದುಕೊಂಡು ಬರುತ್ತಿರುವ ಬಗ್ಗೆ ತಮಗೆ ಬಾತ್ಮೀ ಬಂದಿದ್ದು, ಸದರಿ ಸ್ಥಳದಲ್ಲಿ ದಾಳಿ ಮಾಡಬೇಕಾಗಿದೆ ಕಾರಣ ನೀವು ಪಂಚರಾಗಿ ಬರಬೇಕು ಎಂದು ನಮಗೆ ಹೇಳಿದರು. ಆ ರೀತಿ ನನಗೆ ಒಂದು ಪತ್ರ ಕೊಟ್ಟರು. ಸದರಿ ಪತ್ರಕ್ಕೆ ನಾನು ಒಪ್ಪಿಕೊಂಡು ಸಹಿ ಮಾಡಿದ್ದೇನೆ. ಸದರಿ ಪತ್ರವನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ನಿಪಿ.1 ಎಂದು ಗುರ್ತಿಸಲಾಯಿತು.

ಅದರಲ್ಲಿರುವ ಸಾಕ್ಷಿಯ ಸಹಿಗೆ ನಿಶಾನೆ.ಪಿ.1(ಎ) ಎಂದು ಗುರ್ತಿಸಲಾಯಿತು. ಅದೇ ರೀತಿ ಚಾಸಾ.3 ಮಹೇಶನಿಗೂ ಸಹ ಪತ್ರವನ್ನು ಕೊಟ್ಟರು. ಆತನೂ ಅದಕ್ಕೆ ಸಹಿ ಮಾಡಿದ್ದಾನೆ. ಮಹೇಶನ ಸಹಿಯನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಈಗ ನನಗೆ ತೋರಿಸಿದ ನೋಟಿಸಿನಲ್ಲಿ ಮಹೇಶನ ಸಹಿ ಇದೆ. ಸದರಿ ನೋಟಿಸಿಗೆ ನಿಪಿ.2 ಎಂದು ಗುರ್ತಿಸಲಾಯಿತು. ಅದರಲ್ಲಿರುವ ಮಹೇಶನ ಸಹಿಗೆ ನಿಪಿ.2(ಎ) ಎಂದು ಗುರ್ತಿಸಲಾಯಿತು.

**3.** ಪತ್ರಾಂಕಿತ ಅಧಿಕಾರಿಯಾಗಿ ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆಯಿಂದ ಜೋನಲ್ ಅಧಿಕಾರಿಯವರನ್ನು ಪೋಲಿಸ್ ಠಾಣೆಗೆ ಕರೆಸಿದ್ದರು. ತೂಕ ಮಾಡಲು ಒಬ್ಬರನ್ನು ಕರೆಸಿದ್ದರು. ನಾನು, ಚಾಸಾ.3, ಚಾಸಾ.1, ಒಬ್ಬ ತೂಕ ಮಾಡುವವರು, ಪೊಲೀಸ್ ಸಿಬ್ಬಂದಿಗಳು ಎರಡು ಜೀಪುಗಳಲ್ಲಿ ಮತ್ತು ದ್ವಿಚಕ್ರ ವಾಹನಗಳಲ್ಲಿ ದೇಸಾಯಿ ಕ್ರಾಸ್, ಹುಬ್ಬಳ್ಳಿಗೆ ಹೋದೆವು. ಅಲ್ಲಿ ನಾವೆಲ್ಲ ನಮ್ಮ ವಾಹನಗಳಿಂದ ಕೆಳಗೆ ಇಳಿದೆವು. ದೇಸಾಯಿ ಕ್ರಾಸ್ ದಿಂದ ಕೆಲವು ಪೊಲೀಸ್ ಸಿಬ್ಬಂದಿಗಳು ಹುಬ್ಬಳ್ಳಿಯ ಸರ್ಕಿಟ್ ಹೌಸಿನ ದಾರಿಗೆ ಹೋದರು. ಆ ಸಮಯದಲ್ಲಿ ಪಿಂಟು ಸರ್ಕಲ್ ನಿಂದ ದೇಸಾಯಿ ಕ್ರಾಸ್ ಕಡೆಗೆ ಇಬ್ಬರು ಒಂದೇ ಮೋಟಾರ್ ಸೈಕಲ್ ನಲ್ಲಿ ಬರುತ್ತಿದ್ದರು. ಪೊಲೀಸ ಸಿಬ್ಬಂದಿಗಳು ಅವರನ್ನು ನಿಲ್ಲಲು ಹೇಳುತ್ತಿದ್ದಾಗ ಅವರು ನಿಲ್ಲದೇ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದರು. ಪೊಲೀಸರಿಂದ ತಪ್ಪಿಸಿಕೊಳ್ಳಲು ಮೋಟಾರ್ ಸೈಕಲ್ ಸವಾರರು ಹುಬ್ಬಳ್ಳಿಯ ಸರ್ಕಿಟ್ ಹೌಸ್ ಪಕ್ಕದಲ್ಲಿರುವ ಸಂದಿಯಿಂದ ಹೋಗಲು ಯತ್ನಿಸಿದರು. ಸದರಿ ಸಂದಿಗೆ ಮುಂದೆ ಹೋಗಲು ದಾರಿ ಇಲ್ಲದ ಕಾರಣ ಅಲ್ಲಿ ಸಿಕ್ಕಿ ಹಾಕಿಕೊಂಡರು.

**4.** ಅವರು ಸಿಕ್ಕ ನಂತರ ನಾವೆಲ್ಲರೂ ಅವರ ಕಡೆಗೆ ಹೋದೆವು. ಅವರ ಬಳಿ ಒಂದೊಂದು ಬ್ಯಾಗುಗಳಿದ್ದವು (ಬ್ಯಾಕ್ ಪ್ಯಾಕ್ ಬ್ಯಾಗ್). ಅವುಗಳಲ್ಲಿ ಒಂದು ಕಪ್ಪು ಮತ್ತು ಒಂದು ಹಳದಿ ಬಣ್ಣದ್ದಾಗಿದ್ದವು. ಪೊಲೀಸ್ ಅಧಿಕಾರಿಗಳು ಸದರಿ ಇಬ್ಬರನ್ನು ವಿಚಾರಣೆ ಮಾಡಿದರು. ಅವರ ಬ್ಯಾಗುಗಳನ್ನು ಚೆಕ್ ಮಾಡಿದಾಗ ಕಪ್ಪು ಬಣ್ಣದ ಒಂದು ಬ್ಯಾಗಿನಲ್ಲಿ ಎರೆಡು ಪ್ಯಾಕೇಟ್‌ಗಳಿದ್ದವು. ಅದನ್ನು ತೆಗೆದು ನೋಡಿದಾಗ ಅದರಲ್ಲಿ ಗಾಂಜಾದ ಒಣಗಿದ ಎಲೆಗಳು ಮತ್ತು ಬೀಜ ಇದ್ದವು. ಇನ್ನೊಂದು ಹಳದಿ ಬಣ್ಣದ ಬ್ಯಾಗಿನಲ್ಲಿ ಒಂದು ಪ್ಯಾಕ್ ಇತ್ತು. ಅದನ್ನು ತೆಗೆದು ನೋಡಿದಾಗ ಅದರಲ್ಲೂ ಸಹ ಗಾಂಜಾ ಇತ್ತು. ಅದನ್ನು ತೆಗೆಯಬೇಕಾದಲ್ಲಿ ಚಾಸಾ.1 ತಮ್ಮ ತಪಾಸಣೆ ಗೆಜೆಟೆಡ್

ಆಫೀಸರ್ ಮುಂದೆ ಮಾಡಬೇಕಾ ಎಂದು ಕೇಳಿ ಗೆಜೆಟೆಡ್ ಆಫೀಸರ್ ಎದುರಿಗೆ ತಪಾಸಣೆ ಮಾಡಿದ್ದಾರೆ. ಆರೋಪಿಗಳೂ ಸಹ ಗೆಜೆಟೆಡ್ ಅಧಿಕಾರಿಯ ಮುಂದೆ ತಮ್ಮನ್ನು ತಪಾಸಣೆ ಮಾಡಬೇಕೆಂದು ಹೇಳಿರುತ್ತಾರೆ.

**5.** ಕಪ್ಪು ಬಣ್ಣದ ಬ್ಯಾಗಿನಲ್ಲಿದ್ದ ಎರಡು ಪ್ಯಾಕೇಟ್‌ಗಳನ್ನು ತೂಕ ಮಾಡಲಾಯಿತು. ಅವುಗಳಲ್ಲಿ ಒಂದು ಪ್ಯಾಕೇಟಿನ ತೂಕ 2 ಕೆ.ಜಿ., 31 ಗ್ರಾಂ. ಆಯಿತು, ಇನ್ನೊಂದು ಪ್ಯಾಕೇಟನ್ನು ತೂಕ ಮಾಡಿದಾಗ ಅದು 2 ಕೆ.ಜಿ., 20 ಗ್ರಾಂ. ಆಯಿತು. ಅವುಗಳಲ್ಲಿ ತಲಾ 3 ಗ್ರಾಂ.ನಂತೆ ಸ್ಯಾಂಪಲ್ಲನ್ನು ತೆಗೆಯಲಾಯಿತು. ಅದಕ್ಕೆ ಎಸ್1 ಮತ್ತು ಎಸ್2 ಎಂದು ಬರೆಯಲಾಯಿತು. ಅವುಗಳನ್ನು ಪುನಃ ಪ್ಯಾಕ್ ಮಾಡಿ ಮೊಹರು ಹಾಕಿದರು. ಆತನ ಬಳಿ ಸದರಿ ಬ್ಯಾಗಿನಲ್ಲಿ ರೂ.1000/- ನಗದು ಹಣ ಸಿಕ್ಕಿತು. ಪೊಲೀಸರು ಎರಡು ಪ್ಯಾಕೇಟ್ ಗಳನ್ನು, ಬ್ಯಾಗ್ ಮತ್ತು ನಗದು ಹಣವನ್ನು ತಮ್ಮ ಸ್ವಾಧೀನಕ್ಕೆ ಪಡೆದುಕೊಂಡರು.

**6.** ಪೊಲೀಸರು ಹಳದಿ ಬಣ್ಣದ ಬ್ಯಾಗನ್ನು ತೆಗೆದು ನೋಡಿದಾಗ ಅದರಲ್ಲಿ ಒಂದು ಪಾಕ್ ಇತ್ತು. ಸದರಿ ಬ್ಯಾಗ್ 2ನೇ ಆರೋಪಿ ಚಂದ್ರಪ್ಪ ಎನ್ನುವವನ ಬಳಿ ಇತ್ತು. ಅದನ್ನು ತೆಗೆದು ನೋಡಿದಾಗ, ಅದರಲ್ಲಿ ಗಾಂಜಾ ಇದ್ದು, ಅದನ್ನು ತೂಕ ಮಾಡಿದಾಗ, ಅದರ ಒಟ್ಟು ತೂಕ 1 ಕೆಜಿ., 49 ಗ್ರಾಂ. ಇರುವುದು ಕಂಡುಬಂತು. ಅದರಿಂದಲೂ ಸಹ 50 ಗ್ರಾಂ. ತೂಕದ ಗಾಂಜಾವನ್ನು ಸ್ಯಾಂಪಲ್ಲಾಗಿ ಪಡೆಯಲಾಯಿತು. ಸದರಿ ಸ್ಯಾಂಪಲಿಗೆ ಎಸ್3 ಎಂದು ಬರೆಯಲಾಯಿತು. ಉಳಿದ ಗಾಂಜಾಗೆ ಆರ್3 ಎಂದು ಬರೆಯಲಾಯಿತು. ಸದರಿ ಪ್ಯಾಕುಗಳನ್ನು ಮೊಹರು ಮಾಡಿದರು. ಅದರ ಮೇಲೆ ನಟ್ ಬೋಲ್ಟನಿಂದ ಮೊಹರು ಮಾಡಿದರು. ಅದರ ಮೇಲೆ ಬರವಣಿಗೆ ಇದ್ದು, ನನಗೆ ಈಗ ನೆನಪಿಲ್ಲ. ಪೊಲೀಸರು ಮೋಟಾರ್ ಸೈಕಲ್‌ನ್ನು ಸಹ ಅಮಾನತ್ತುಪಡಿಸಿಕೊಂಡಿದ್ದಾರೆ.

**7.** ಸದರಿ ಜಾಗದಲ್ಲಿ ಪಂಚನಾಮೆಯನ್ನು ಬರೆಯಲಾಯಿತು. ಸಂಜೆ 6.15 ರಿಂದ ರಾತ್ರಿ 8.15 ರವರೆಗೆ ಪಂಚನಾಮೆಯನ್ನು ಬರೆಯಲಾಯಿತು. ಪಂಚನಾಮೆ ಮಾಡುವಾಗ ಫೋಟೋಗಳನ್ನು ತೆಗೆದಿದ್ದಾರೆ. ಸದರಿ ಪಂಚನಾಮೆಗೆ ನನ್ನ ಸಹಿ ಪಡೆದಿದ್ದಾರೆ. ಪಂಚನಾಮೆಗೆ ನಾನು, ಪತ್ರಾಂಕಿತ ಅಧಿಕಾರಿ, ಚಾಸಾ.1 ಪಿ.ಐ., ಚಾಸಾ.3 ಇಬ್ರಾಹಿಂಪುರ ಮತ್ತು ಪೊಲೀಸ್ ಸಿಬ್ಬಂದಿಗಳು ಸಹಿಗಳನ್ನು

ಮಾಡಿದ್ದಾರೆ. ಆ ದಿನ ಬರೆದ ಪಂಚನಾಮೆಯನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು, ಅದಕ್ಕೆ ನಿಪಿ.3 ಎಂದು ಗುರ್ತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಗಳಿಗೆ ನಿಶಾನೆ.ಪಿ. 3(ಎ) ದಿಂದ (ಇ)ವರೆಗೆ ಗುರ್ತಿಸಲಾಯಿತು. ಪಂಚನಾಮೆಗೆ ಮಹೇಶ ಇಬ್ರಾಹಿಂಪುರ ಸಹ ಸಹಿ ಮಾಡಿದ್ದಾರೆ. ಅವರ ಸಹಿಯನ್ನು ನೋಡಿದಲ್ಲಿ ಗುರ್ತಿಸಬಹುದು. ಸದರಿ ಸಹಿಗಳಿಗೆ ನಿಪಿ.3(ಎಫ್) ದಿಂದ ನಿಪಿ.3(ಜೆ) ಎಂದು ಗುರ್ತಿಸಲಾಯಿತು.

**8.** ಪಂಚನಾಮೆ ಸಮಯದಲ್ಲಿ ತೆಗೆದ ಪೋಟೋಗಳನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಅವುಗಳು 34 ಪೋಟೋಗಳಿದ್ದು ಸದರಿ ಪೋಟೋಗಳಿಗೆ ನಿಪಿ.4 ರಿಂದ 37 ಎಂದು ಗುರ್ತಿಸಲಾಯಿತು. ಆ ದಿನ ಪಡೆದ ಸ್ಯಾಂಪಲ್ ಪ್ಯಾಕೇಟಗಳನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ನಗದು ಹಣ ಮತ್ತು ಬ್ಯಾಗ್‌ನ್ನು ನೋಡಿದರೂ ಸಹ ಗುರ್ತಿಸುತ್ತೇನೆ. ಎಸ್1 ದಿಂದ ಎಸ್ 3 ವರೆಗೆ ಎಂದು ಬರೆದ ಸ್ಯಾಂಪಲ್ ಪ್ಯಾಕೇಟ್‌ಗಳಿಗೆ ಮುಮಾ.1 ರಿಂದ 3 ಎಂದು ಗುರ್ತಿಸಲಾಯಿತು. ಕಪ್ಪು ಬಣ್ಣದ ಬ್ಯಾಕ್ ಪ್ಯಾಕ್ ಬ್ಯಾಗನ್ನು ನೋಡುತ್ತಿದ್ದು, ಅದಕ್ಕೆ ಮುಮಾ.4 ಎಂದು ಗುರ್ತಿಸಲಾಯಿತು. ಹಳದಿ ಬಣ್ಣದ ಕ್ಯಾರಿಬ್ಯಾಗ್ ನೋಡುತ್ತಿದ್ದು, ಅದಕ್ಕೆ ಮುಮಾ.5 ಎಂದು ಗುರ್ತಿಸಲಾಯಿತು. ನಗದು ಹಣವನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಬ್ರೌನ್ ಕವರಿನಲ್ಲಿ ಹಾಕಿರುವ ನಗದು ಹಣವನ್ನು ನೋಡುತ್ತಿದ್ದು, ಅವುಗಳು ಒಟ್ಟು ರೂ.1000/- ಆಗಿದ್ದು, ಅದಕ್ಕೆ ಮುಮಾ.6 ಎಂದು ಗುರ್ತಿಸಲಾಯಿತು. ಆರೋಪಿಗಳನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಸಾಕ್ಷಿ 1 ನೇ ಆರೋಪಿಯನ್ನು ವಿಡಿಯೋ ಕಾನ್ಫರೆನ್ಸದಲ್ಲಿ ನೋಡಿ ಗುರ್ತಿಸಿದ್ದಾರೆ. 2 ನೇ ಆರೋಪಿಯ ಪೋಟೋವನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ನಿಪಿ.17 ಮತ್ತು 18 ರಲ್ಲಿ, ನಿಪಿ.17(ಎ) ಮತ್ತು 18(ಎ)ದಲ್ಲಿ ಇರುವ ಪೋಟೋಗಳು 2 ನೇ ಆರೋಪಿಯದು. ಆ ದಿನ 1 ಮತ್ತು 2 ನೇ ಆರೋಪಿಗಳು ಬಂದ ಮೋಟಾರ್ ಸೈಕಲ್‌ನ್ನು ನೋಡಿದಲ್ಲಿ ಗುರ್ತಿಸುತ್ತೇನೆ. ಅದರ ಪೋಟೋವನ್ನು ನೋಡಿದಲ್ಲಿ ಗುರ್ತಿಸುತ್ತೇನೆ. (ಮೋಟಾರ್ ಸೈಕಲ್ ಪೋಲಿಸ್ ಠಾಣೆಯಲ್ಲಿದ್ದು, ಅದರ ಪೋಟೋ ಲಭ್ಯವಿದೆ). ನಿಪಿ.5 ರಲ್ಲಿ ಅದರ ಪೋಟೋ ಇದೆ. ಸದರಿ ಮೋಟಾರ್ ಸೈಕಲ್ ನಂಬರ ಅದರಲ್ಲಿ ಕಾರಣದೇ ಇರುವ ಕಾರಣ ಅದನ್ನು ಗುರ್ತಿಸಿರುವುದಿಲ್ಲ. ಸದರಿ ಮೋಟಾರ್ ಸೈಕಲ್‌ನ ನೊಂದಣಿ ಸಂಖ್ಯೆಯನ್ನು ಹೇಳಬಹುದು. ಅದರ ನಂಬರ ಕೆಎ-26-ಇಡಿ-2911 ಆಗಿದೆ.

**ಪಾಟೀಸವಾಲು 3 ನೇ ಆರೋಪಿ ಪರವಾಗಿ ಶ್ರೀ. ವಿ ಜಿ ಹೆಚ್ ವಕೀಲರು ಪಾಟಿ ಸವಾಲು ಇಲ್ಲವೆಂದು ಹೇಳುತ್ತಾರೆ.**

**ಪಾಟೀಸವಾಲು 4 ನೇ ಆರೋಪಿ ಪರವಾಗಿ ಶ್ರೀ. ಬಿ ಆರ್ ಎಂ ವಕೀಲರಿಂದಃ ವಕೀಲರು ಗೈರುಹಾಜರಿ. ಕಾರಣ ಪಾಟಿ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.**

**ಪಾಟೀಸವಾಲು 1 ಮತ್ತು 2 ನೇ ಆರೋಪಿಗಳ ಪರವಾಗಿ ಶ್ರೀ. ಟಿ ಆರ್ ಪಿ ವಕೀಲರಿಂದಃ**

**9.** ವಕೀಲರು ತಮ್ಮ ವೈಯ್ಯಕ್ತಿಕ ಕಾರಣಕ್ಕಾಗಿ ಸಮಯ ಕೋರುತ್ತಾರೆ. ಸಾಕ್ಷಿಗೆ ರೂ.1000/- ಖರ್ಚು ಕೊಡುವ ಶರತ್ತಿಗೊಳಪಟ್ಟು ಸಮಯ ನೀಡಲಾಯಿತು.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

07/12/2021

**(ಉಮೇಶ ಎಂ ಅಡಿಗ)**

ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ

ನ್ಯಾಯಾಧೀಶರು, ಧಾರವಾಡ.

**ಇಂದು ದಿಃ 08/02/2022 ರಂದು ಸಾಕ್ಷಿ ಲೋಹಿತ ಸಂಕನಗೌಡರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯಿಂದ ವಾಹನವನ್ನು ಗುರ್ತಿಸಬೇಕಾಗಿದ್ದು, ಸದರಿ ವಾಹನ ಪೋಲಿಸ್_ಠಾಣೆಯಲ್ಲಿದ್ದು ಅದನ್ನು ನ್ಯಾಯಾಲಯಕ್ಕೆ ತರಲು ತೊಂದರೆಯಾಗುತ್ತಿದ್ದ ಕಾರಣ ಸದರಿ ವಾಹನದ ಪೋಟೋಗಳನ್ನು ಹಾಜರಪಡಿಸಿದ್ದೇವೆ. ಕಾರಣ ಅದನ್ನು ಗುರ್ತಿಸಲು ಅನುಮತಿ ಕೊಡಬೇಕೆಂದು ಕೋರಿದ್ದಾರೆ. ಸಾಕ್ಷಿ ಪಾಟಿಸವಾಲಿಗಾಗಿ ಹಾಜರಿದ್ದ ಕಾರಣ ಅನುಮತಿ ನೀಡಲಾಯಿತು. ಮುಂದುವರೆದ ಮುಖ್ಯ ವಿಚಾರಣೆಯನ್ನು ಪಡೆದುಕೊಳ್ಳಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

10. ಸದರಿ ಮೋಟಾರ್ ಸೈಕಲ್‌ನ ನಾಲ್ಕು ಪೋಟೋಗಳನ್ನು ಹಾಜರಪಡಿಸಿದ್ದು, ಅವುಗಳಿಗೆ ನಿಪಿ.38 ರಿಂದ 41 ಎಂದು ಗುರ್ತಿಸಲಾಯಿತು. ಅವುಗಳ ಸಿ.ಡಿ.,ಗೆ ನಿಪಿ.42 ಎಂದು ಗುರ್ತಿಸಲಾಯಿತು.

**ಪಾಟೀಸವಾಲು 1 ಮತ್ತು 2 ನೇ ಆರೋಪಿಗಳ ಪರವಾಗಿ ಶ್ರೀ. ಟಿ ಆರ್ ಪಿ ವಕೀಲರಿಂದಃ**

11. ನನ್ನ ಮೇಲಾಧಿಕಾರಿಗಳು ಲಿಖಿತವಾಗಿ ಆದೇಶ ಮಾಡಿದರೂ ಸಹ ಕಚೇರಿಯಿಂದ ಹೊರಗೆ ಹೋಗಬೇಕಾಗಿದಲ್ಲಿ ಮೂಮೆಂಟ್ ರಜಿಸ್ಟರಿನಲ್ಲಿ ಬರೆದು ಹೋಗಬೇಕಾಗುತ್ತದೆ ಅನ್ನುವದು ಸರಿ. ಆ ದಿನ ನಾನು ಮೂಮೆಂಟ್ ರಜಿಸ್ಟರಿನಲ್ಲಿ ಬರೆದಿಲ್ಲ. ಅದರಲ್ಲಿ ಬರೆದು ಹೋಗಲು ನನಗೆ ತೊಂದರೆ ಇರಲಿಲ್ಲ. ನಮ್ಮ ಕಚೇರಿಯಿಂದ ಮದ್ಯಾಹ್ನ 3.50 ಗಂಟೆಗೆ ಹೊರಟಿದ್ದೇನೆ. ನಮ್ಮ ಕಚೇರಿಯಿಂದ ಉಪನಗರ ಪೋಲಿಸ್ ಠಾಣೆ ನಮ್ಮ ಕಂಪೌಂಡ್ ಪಕ್ಕದಲ್ಲಿಯೇ ಇದೆ. ನಮ್ಮ ಕಚೇರಿಯಿಂದ ಪೋಲಿಸ್ ಠಾಣೆಗೆ ಹೋಗಲು 5 ರಿಂದ 10 ನಿಮಿಷ ಸಮಯ ಬೇಕಾಗುತ್ತದೆ. ನಮ್ಮ ಕಚೇರಿಯಲ್ಲಿ ದಿನನಿತ್ಯದ ಕೆಲಸವನ್ನು 3.30 ರಿಂದ 3.50 ರವರೆಗೆ ಮಾಡಿದ್ದೇನೆ. ಗುನ್ನಾ ಜಾಗಕ್ಕೆ ಮುಟ್ಟಿದಾಗ ಸಂಜೆ 5.30 ಗಂಟೆಯಾಗಿತ್ತು. ಆ ದಿನ ಪೋಲಿಸ್ ಠಾಣೆಯನ್ನು ಸಂಜೆ 5.15 ಗಂಟೆಗೆ ಹೊರಟಿದ್ದೇವೆ, ಅಲ್ಲಿಯವರೆಗೂ ಪೋಲಿಸ್ ಠಾಣೆಯಲ್ಲಿ ಇದ್ದೆ.

12. ಪೊಲೀಸರು ನನಗೆ ನೋಟಿಸ್ ಕೊಡುವಾಗ 4.05 ಗಂಟೆಯಿಂದ 4.10 ಗಂಟೆಯಾಗಿರಬಹುದು. ಸದರಿ ನೋಟಿಸಿನಲ್ಲಿ ಸ್ವೀಕರಿಸಿದ ಸಮಯವನ್ನು ಬರೆದಿಲ್ಲ. ಅದೇ ರೀತಿ ಮಹೇಶನು ಸಹ ಅದರಲ್ಲಿ ಸಮಯವನ್ನು ಬರೆದಿಲ್ಲ. ಪೊಲೀಸರು ತಹಶೀಲ್ದಾರರರಿಗೆ ಕೊಟ್ಟ ನೋಟಿಸಿನಲ್ಲಿ ದಿನಾಂಕ ಮತ್ತು ಸಮಯವನ್ನು ಬರೆದಿದ್ದಾರಾ ಎಂದರೆ ಸಾಕ್ಷಿಯು ನಾವು ಅದನ್ನು ನೋಡಿಲ್ಲ ಎಂದು ಹೇಳುತ್ತಾರೆ. ತಹಶೀಲ್ದಾರ ನನಗೆ ಕೊಟ್ಟ ಲಿಖಿತ ಆದೇಶದಲ್ಲಿ ಸ್ವೀಕರಿಸಿದ ಸಮಯವನ್ನು ನಾನು ಬರೆದಿಲ್ಲ.

13. ನಾನು ಬೇರೆ ಕೇಸುಗಳಲ್ಲಿ 2 ರಿಂದ 3 ಸಲ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿದ್ದೇನೆ ಅನ್ನುವುದು ಸರಿಯಲ್ಲ. ಪೋಲಿಸ್ ಠಾಣೆಗೆ ಹೋಗಿ ನಾನು ಪಿ.ಐ., ಗೆ ಭೇಟಿಯಾಗಿದ್ದೇನೆ. ಪೋಲಿಸ್ ಠಾಣೆಗೆ ನನ್ನನ್ನು ಬೇರೆ ಯಾರೂ ಕರೆದುಕೊಂಡು ಹೋಗಿರಲಿಲ್ಲ. ಪೋಲಿಸ್ ಠಾಣೆಯಲ್ಲಿ ಅಥವಾ ಪೊಲೀಸ್ ಜೀಪಿನಲ್ಲಿ ನಾವು ನಮ್ಮ ಬಳಿ ಏನೂ ಇಲ್ಲ ಎಂದು ತೋರಿಸುವ ಬಗ್ಗೆ ಅಂಗಜಪ್ತಿ ಮಾಡಿಕೊಂಡಿಲ್ಲ. (ಆರೋಪಿ ಪರ ವಕೀಲರು ಪ್ಯಾಕು ಮಾಡಿ, ಮೊಹರು ಮಾಡಿದ ಮುಮಾ.2 ನ್ನು ಅದರೊಳಗಿರುವ ವಸ್ತುವನ್ನು ನೋಡುವ ಬಗ್ಗೆ ತೆರೆಯಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು. ಪ್ಯಾಕನ್ನು ತೆರೆಯಲಾಯಿತು.) ಪಂಚನಾಮೆಗೆ ಸಹಿಯನ್ನು ನಾನು ಪೋಲಿಸ್ ಠಾಣೆಯಲ್ಲಿ ಮಾಡಿದ್ದೇನೆ ಅನ್ನುವುದು ಸರಿಯಲ್ಲ. ಆ ದಿನ ಒಟ್ಟಿಗೆ ಎಂಟು ಸಹಿಗಳನ್ನು ಮಾಾಡಿದ್ದೇನೆ. ಮುಮಾ.1 ರಿಂದ 6 ರ ಮೇಲೆ ಅದನ್ನು ಯಾರಿಂದ ಜಪ್ತು ಪಡಿಸಲಾಗಿದೆ ಎಂದು ಅವರ ಹೆಸರನ್ನು ಬರೆದಿಲ್ಲ. ಮುಮಾ.1 ರಿಂದ 6 ನ್ನು ಆ ವ್ಯಕ್ತಿಗಳಿಂದ ಜಪ್ತು ಮಾಡದೇ ಇದ್ದ ಕಾರಣ ಅವರ ಹೆಸರುಗಳನ್ನು ಬರೆದಿಲ್ಲ ಅನ್ನುವುದು ಸರಿಯಲ್ಲ.

14. ನಿಶಾನೆ.ಪಿ. 3 ರ ಎಲ್ಲಾ ಪುಟಗಳಿಗೆ ನಾನು ಸಹಿ ಮಾಡಿದ್ದೇನೆ. ನಿಪಿ.3 ರ 1, 3, 5, 7, 9 ನೇ ಪುಟಗಳಲ್ಲಿ ನನ್ನ ಸಹಿಗಳು ಇಲ್ಲ ಎನ್ನುವುದು ನಿಜ. ಸದರಿ ಪುಟಗಳಲ್ಲಿ ನನ್ನ ಸಮಕ್ಷಮ ಬರೆದಿರಲಿಲ್ಲ ಕಾರಣ ನನ್ನ ಸಹಿ ಪಡೆದಿಲ್ಲ ಅನ್ನುವುದು ಸರಿಯಲ್ಲ. ಖಾಲಿ ಹಾಳೆಯ ಮೇಲೆ ನನ್ನ ಸಹಿ ಪಡೆದು ನಂತರ ಅದರಲ್ಲಿ ಬರೆದುಕೊಂಡಿದ್ದಾರೆ ಅನ್ನುವುದು ಸರಿಯಲ್ಲ. ಸಾಮಾನ್ಯವಾಗಿ ಸಂಜೆ 6.15 ರಿಂದ ರಾತ್ರಿ 8.15 ಗಂಟೆಯವರೆಗೆ ಕತ್ತಲು ಇರುತ್ತದೆ ಎಂದರೆ ಆ ದಿನ ಅಷ್ಟೊಂದು ಕತ್ತಲು ಇರಲಿಲ್ಲ

ಎಂದು ಸಾಕ್ಷಿ ಹೇಳುತ್ತಾರೆ. ಅಮಾನತ್ತುಪಡಿಸುವಾಗ ಮುದ್ದೆಮಾಲುಗಳ ಮೇಲೆ ಎಸ್ 1 ರಿಂದ ಎಸ್ 3 ಎಂದು ಬರೆದಿರುವ ವಸ್ತುಗಳು ಇದ್ದವು.

15. ದಿಃ 02/09/2020 ರಂದು ಸಂಜೆ 4.00 ಗಂಟೆಗೆ ನಾನು ಹುಬ್ಬಳ್ಳಿ ಸಬ್ ಅರ್ಬನ್ ಪೋಲಿಸ್ ಠಾಣೆಗೆ ಹೋಗಿಲ್ಲ ಅನ್ನುವುದು ಸರಿಯಲ್ಲ. ಅ ಕಾರಣದಿಂದ ಮುಮೆಂಟ್ ರಜಿಸ್ಟರಿನಲ್ಲಿ ಬರೆದಿಲ್ಲ ಅನ್ನುವುದು ಸರಿಯಲ್ಲ. ''....ಚಾಸಾ.1 ಪಿ.ಐ., ಗಾಂಜಾ ತೆಗೆದುಕೊಂಡು ಬರುತ್ತಿರುವ ಬಗ್ಗೆ ತಮಗೆ ಬಾತ್ಮೀ ಬಂದಿದ್ದು, ಸದರಿ ಸ್ಥಳದಲ್ಲಿ ದಾಳಿ ಮಾಡಬೇಕಾಗಿದೆ ಕಾರಣ ನೀವು ಪಂಚರಾಗಿ ಬರಬೇಕು ಎಂದು ನಮಗೆ ಹೇಳಿದರು, ಆ ರೀತಿ ನನಗೆ ಮತ್ತು ಮಹೇಶನಿಗೆ ಪತ್ರ ಕೊಟ್ಟರು, ಸದರಿ ಪತ್ರಕ್ಕೆ ನಾವು ಒಪ್ಪಿಕೊಂಡು ಸಹಿ ಮಾಡಿದ್ದೇವೆ'' ಅಂತಾ ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

16. ''....ಪತ್ರಾಂಕಿತ ಅಧಿಕಾರಿಯಾಗಿ ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆಯಿಂದ ಜೋನಲ್ ಅಧಿಕಾರಿಯವರನ್ನು ಪೋಲಿಸ್ ಠಾಣೆಗೆ ಕರೆಸಿದ್ದರು, ತೂಕ ಮಾಡಲು ಒಬ್ಬರನ್ನು ಕರೆಸಿದ್ದರು, ನಾನು, ಚಾಸಾ.3, ಚಾಸಾ.1, ಒಬ್ಬ ತೂಕ ಮಾಡುವವರು, ಪೊಲೀಸ್ ಸಿಬ್ಬಂದಿಗಳು ಎರಡು ಜೀಪುಗಳಲ್ಲಿ ಮತ್ತು ದ್ವಿಚಕ್ರ ವಾಹನಗಳಲ್ಲಿ ದೇಸಾಯಿ ಕ್ರಾಸ್, ಹುಬ್ಬಳ್ಳಿಗೆ ಹೋದೆವು, ಅಲ್ಲಿ ನಾವೆಲ್ಲ ನಮ್ಮ ವಾಹನಗಳಿಂದ ಕೆಳಗೆ ಇಳಿದೆವು, ದೇಸಾಯಿ ಕ್ರಾಸ್ ದಿಂದ ಕೆಲವು ಪೊಲೀಸ್ ಸಿಬ್ಬಂದಿಗಳು ಹುಬ್ಬಳ್ಳಿಯ ಸರ್ಕಿಟ್ ಹೌಸಿನ ದಾರಿಗೆ ಹೋದರು'' ಅಂತಾ ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

17. ''....ಆ ಸಮಯದಲ್ಲಿ ಪಿಂಟು ಸರ್ಕಲ್ ನಿಂದ ದೇಸಾಯಿ ಕ್ರಾಸ್ ಕಡೆಗೆ ಇಬ್ಬರು ಒಂದೇ ಮೋಟಾರ್ ಸೈಕಲ್ ನಲ್ಲಿ ಬರುತ್ತಿದ್ದರು, ಪೊಲೀಸ ಸಿಬ್ಬಂದಿಗಳು ಅವರನ್ನು ನಿಲ್ಲಲು ಹೇಳುತ್ತಿದ್ದಾಗ ಅವರು ನಿಲ್ಲದೇ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದರು, ಪೊಲೀಸರಿಂದ ತಪ್ಪಿಸಿಕೊಳ್ಳಲು ಮೋಟಾರ್ ಸೈಕಲ್ ಸವಾರರು ಹುಬ್ಬಳ್ಳಿಯ ಸರ್ಕಿಟ್ ಹೌಸ್ ಪಕ್ಕದಲ್ಲಿರುವ ಸಂದಿಯಿಂದ ಹೋಗಲು ಯತ್ನಿಸಿದರು, ಸದರಿ ಸಂದಿಗೆ ಮುಂದೆ ಹೋಗಲು ದಾರಿ ಇಲ್ಲದ ಕಾರಣ ಅಲ್ಲಿ ಸಿಕ್ಕಿ ಹಾಕಿಕೊಂಡರು'' ಅಂತಾ ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

18. ''....ಅವರು ಸಿಕ್ಕ ನಂತರ ನಾವೆಲ್ಲರೂ ಅವರ ಕಡೆಗೆ ಹೋದೆವು. ಅವರ ಬಳಿ ಒಂದೊಂದು ಬ್ಯಾಗುಗಳಿದ್ದವು (ಬ್ಯಾಕ್ ಪ್ಯಾಕ್ ಬ್ಯಾಗ್). ಅವುಗಳಲ್ಲಿ ಒಂದು ಕಪ್ಪು ಮತ್ತು ಒಂದು ಹಳದಿ ಬಣ್ಣದ್ದಾಗಿದ್ದವು, ಪೊಲೀಸ್ ಅಧಿಕಾರಿಗಳು ಸದರಿ ಇಬ್ಬರನ್ನು ವಿಚಾರಣೆ ಮಾಡಿದರು, ಅವರ ಬ್ಯಾಗುಗಳನ್ನು ಚೆಕ್ ಮಾಡಿದಾಗ ಕಪ್ಪು ಬಣ್ಣದ ಒಂದು ಬ್ಯಾಗಿನಲ್ಲಿ ಎರೆಡು ಪ್ಯಾಕೇಟ್‌ಗಳಿದ್ದವು, ಅದನ್ನು ತೆಗೆದು ನೋಡಿದಾಗ ಅದರಲ್ಲಿ ಗಾಂಜಾದ ಒಣಗಿದ ಎಲೆಗಳು ಮತ್ತು ಬೀಜ ಇದ್ದವು, ಇನ್ನೊಂದು ಹಳದಿ ಬಣ್ಣದ ಬ್ಯಾಗಿನಲ್ಲಿ ಒಂದು ಪ್ಯಾಕ್ ಇತ್ತು, ಅದನ್ನು ತೆಗೆದು ನೋಡಿದಾಗ ಅದರಲ್ಲೂ ಸಹ ಗಾಂಜಾ ಇತ್ತು, ಅದನ್ನು ತೆಗೆಯಬೇಕಾದಲ್ಲಿ ಚಾಸಾ.1 ತಮ್ಮ ತಪಾಸಣೆ ಗೆಜೆಟೆಡ್ ಆಫೀಸರ್ ಮುಂದೆ ಮಾಡಬೇಕಾ ಎಂದು ಕೇಳಿ ಗೆಜೆಟೆಡ್ ಆಫೀಸರ್ ಎದುರಿಗೆ ತಪಾಸಣೆ ಮಾಡಿದ್ದಾರೆ. ಆರೋಪಿಗಳೂ ಸಹ ಗೆಜೆಟೆಡ್ ಅಧಿಕಾರಿಯ ಮುಂದೆ ತಮ್ಮನ್ನು ತಪಾಸಣೆ ಮಾಡಬೇಕೆಂದು ಹೇಳಿರುತ್ತಾರೆ'' ಅಂತಾ ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

19. ''......ಕಪ್ಪು ಬಣ್ಣದ ಬ್ಯಾಗಿನಲ್ಲಿದ್ದ ಎರಡು ಪ್ಯಾಕೇಟ್‌ಗಳನ್ನು ತೂಕ ಮಾಡಲಾಯಿತು. ಅವುಗಳಲ್ಲಿ ಒಂದು ಪ್ಯಾಕೇಟಿನ ತೂಕ 2 ಕೆ.ಜಿ., 31 ಗ್ರಾಂ. ಆಯಿತು, ಇನ್ನೊಂದು ಪ್ಯಾಕೇಟನ್ನು ತೂಕ ಮಾಡಿದಾಗ ಅದು 2 ಕೆ.ಜಿ., 20 ಗ್ರಾಂ. ಆಯಿತು, ಅವುಗಳಲ್ಲಿ ತಲಾ 3 ಗ್ರಾಂ.ನಂತೆ ಸ್ಯಾಂಪಲ್ಲನ್ನು ತೆಗೆಯಲಾಯಿತು, ಅದಕ್ಕೆ ಎಸ್1 ಮತ್ತು ಎಸ್2 ಎಂದು ಬರೆಯಲಾಯಿತು. ಅವುಗಳನ್ನು ಪುನಃ ಪ್ಯಾಕ್ ಮಾಡಿ ಮೊಹರು ಹಾಕಿದರು, ಆತನ ಬಳಿ ಸದರಿ ಬ್ಯಾಗಿನಲ್ಲಿ ರೂ.1000/- ನಗದು ಹಣ ಸಿಕ್ಕಿತು, ಪೊಲೀಸರು ಎರಡು ಪ್ಯಾಕೇಟ್ ಗಳನ್ನು, ಬ್ಯಾಗ್ ಮತ್ತು ನಗದು ಹಣವನ್ನು ತಮ್ಮ ಸ್ವಾಧೀನಕ್ಕೆ ಪಡೆದುಕೊಂಡರು'' ಅಂತಾ ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

20. ''......ಸದರಿ ಜಾಗದಲ್ಲಿ ಪಂಚನಾಮೆಯನ್ನು ಬರೆಯಲಾಯಿತು, ಸಂಜೆ 6.15 ರಿಂದ ರಾತ್ರಿ 8.15 ರವರೆಗೆ ಪಂಚನಾಮೆಯನ್ನು ಬರೆಯಲ್ಾಯಿತು, ಪಂಚನಾಮೆ ಮಾಡುವಾಗ ಫೋಟೋಗಳನ್ನು ತೆಗೆದಿದ್ದಾರೆ, ಸದರಿ ಪಂಚನಾಮೆಗೆ ನನ್ನ ಸಹಿ ಪಡೆದಿದ್ದಾರೆ, ಪಂಚನಾಮೆಗೆ ನಾನು, ಪತ್ರಾಂಕಿತ ಅಧಿಕಾರಿ, ಚಾಸಾ.1 ಪಿ.ಐ., ಚಾಸಾ.3 ಇಬ್ರಾಹೀಂಪುರ ಮತ್ತು ಪೊಲೀಸ್ ಸಿಬ್ಬಂದಿಗಳು ಸಹಿಗಳನ್ನು ಮಾಡಿದ್ದಾರೆ'' ಅಂತಾ ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ಪಂಚನಾಮೆಗೆ ಮಹೇಶ ಇಬ್ರಾಹಿಂಪುರ ಸಹಿ ಮಾಡಿಲ್ಲ ಅನ್ನುವುದು ಸರಿಯಲ್ಲ.

21. ಪಂಚನಾಮೆ ಸಮಯದಲ್ಲಿ ಪೋಟೋಗಳನ್ನು ತೆಗೆದಿದ್ದಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ನಿಪಿ.4 ರಿಂದ 37 ನ್ನು ಆ ಸ್ಥಳದಲ್ಲಿ ತೆಗೆದೇ ಇಲ್ಲ ಅನ್ನುವುದು ಸರಿಯಲ್ಲ.

22. 1 ಮತ್ತು 2 ನೇ ಆರೋಪಿಗಳನ್ನು ಹಿಡಿದ ಸಂದರ್ಭದಲ್ಲಿ ನಾನಾಗಲೀ, ಪತ್ರಾಂಕಿತ ಅಧಿಕಾರಿಯಾಗಲೀ ಅಥವಾ ಪೊಲೀಸ್ ಅಧಿಕಾರಿಗಳಾಗಲೀ ನಮ್ಮ ಅಂಗಜಪ್ತಿಯನ್ನು ಮಾಡಿಕೊಂಡಿಲ್ಲ. 1 ಮತ್ತು 2 ನೇ ಆರೋಪಿಗಳ ಅಂಗಜಪ್ತಿಯನ್ನು ಪೊಲೀಸರು ಮಾಡಿದ್ದಾರೆ. ಪಂಚನಾಮೆಯನ್ನು ಪತ್ರಾಂಕಿತ ಅಧಿಕಾರಿ ಹೇಳಿದಂತೆ ಪೊಲೀಸ್ ಪೇದೆ ಬರೆದಿರುತ್ತಾರೆ. ನಿಪಿ.3 ನ್ನು ಪೋಲಿಸ್ ಠಾಣೆಯಲ್ಲಿ ಬರೆದು, ನಾವೆಲ್ಲರೂ ಅಲ್ಲಿಯೇ ಸಹಿ ಮಾಡಿದ್ದೇವೆ ಅನ್ನುವುದು ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾವು ಯಾವುದೇ ಸ್ಥಳಕ್ಕೆ ಹೋಗಿ ಯಾವುದೇ ಪ್ರಕ್ರಿಯೆಯನ್ನು ಮಾಡದೇ ಇದ್ದರೂ ಸಹ ಪೊಲೀಸರ ಒತ್ತಾಯಕ್ಕೆ ಮಣಿದು ಹಾಗೂ ಅವರು ಹೇಳಿದಂತೆ ಸಾಕ್ಷಿ ಹೇಳದಿದ್ದಲ್ಲಿ ನನ್ನ ನೌಕರಿಗೆ ತೊಂದರೆಯಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಪಾಟಿಸವಾಲು 3 ನೇ ಆರೋಪಿಗಳ ಪರವಾಗಿ: ಶ್ರೀ ವಿ ಜಿ ಹೆಚ್ ವಕೀಲರಿಂದ ಪಾಟಿಸವಾಲು ಇಲ್ಲವೆಂದು ಹೇಳುತ್ತಾರೆ.**

**ಪಾಟಿಸವಾಲು 4 ನೇ ಆರೋಪಿಗಳ ಪರವಾಗಿ: ಅವರ ಪರ ವಕೀಲರು ಗೈರುಹಾಜರಿ. ಕಾರಣ ಪಾಟಿಸವಾಲು ಮಾಡಲಿಲ್ಲವೆಂದು ಪರಿಗಣಿಸಲಾಯಿತು.**

**ಮರುವಿಚಾರಣೆ ಇಲ್ಲ.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

08/02/2022

**(ಉಮೇಶ ಎಂ ಅಡಿಗ)**

ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ

ನ್ಯಾಯಾಧೀಶರು, ಧಾರವಾಡ.